ಕರ್ನಾಟಕ ಸರ್ಕಾರ

ಏಪ್ರಿಲ್ 21, 2016

# ಮಾಜಿ ಸಚಿವ ಸಿ ಗುರುನಾಥ್ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ಏಪ್ರಿಲ್ 21:

ಮಾಜಿ ಸಚಿವ ಸಿ ಗುರುನಾಥ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕಾರ್ಮಿಕ ಮುಖಂಡರಾಗಿ ಹಾಗೂ ಕಾರ್ಮಿಕ ಸಚಿವರಾಗಿ ಗುರುನಾಥ್ ಅವರು ಬೆಳೆದು ಬಂದ ಹಾದಿ ಸ್ಮರಣಾರ್ಹವಾದುದು. ಹೆಚ್ ಡಿ ದೇವೇಗೌಡ ಹಾಗೂ ಜೆ ಹೆಚ್ ಪಟೇಲ್ ಅವರ ಸಚಿವ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿದ್ದ ಗುರುನಾಥ್ ಅವರು ಸದಾ ಕಾರ್ಮಿಕ ಪರ ಒಲವು ಇರಿಸಿಕೊಂಡಿದ್ದರು. ಅತ್ಯಂತ ಸ್ನೇಹ ಜೀವಿಯಾಗಿದ್ದ ಗುರುನಾಥ್ ಅವರ ಹಠಾತ್ ಸಾವು ನನ್ನಲ್ಲಿ ಅತ್ಯಂತ ನೋವು ತಂದಿದೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

***********

ಡಿ ಪಿ ಎಂ